"ನೋಡ್ತಿದೀಯಲ್ಲ ನೀನೇ..."

"ಪಾಪ..." ಅಂದಳು ಶ್ರಾವಂತಿ ಹೃದಯಪೂರ್ವಕವಾಗಿ.

"ಒಂದಷ್ಟು ದಿನ ಆದ್ರೂ ಆ ಮನೆಯ ಗೋಜಲಿಂದ ತಪ್ಪಿಸ್ಕೊಂಡಿರೋಕೆ ಅವಳು ಇಲ್ಲಿಗೆ ಓಡ್ಬರ್ತಾಳೆ ಕಣೇ. ನಂಗೂ ಅಕ್ಕನ ಋಣ ಇದೆ ಅಲ್ವಾ? ಅವಳು ಕೈಬಿಟ್ಟಿದ್ರೆ ಭಿಕ್ಷೆ ಬೇಡಿ ಬದುಕ್ಬೇಕಾಗಿತ್ತು ನಾನು..."

ಬಿಗಿದು ಬಂತು ನಕುಲನ ಕಂಠ. ಮಾತು ಗೊಗ್ಗರಾಯ್ತು. ಶ್ರಾವಂತಿ ಅವನ ಪಕ್ಕ ಕೂತು ಅವನ ಕೈ ಹಿಡಿದು ತೊಡೆಯ ಮೇಲಿಟ್ಟುಕೊಂಡು ಸವರಿದಳು, ಸಾಂತ್ವನಿಸುವಂತೆ. ನಕುಲ ಮುಂದುವರಿಸಿದ,

"ನಾನು ಅವಳ ಕಷ್ಟಾನ ಹಂಚ್ಕೊಳ್ಳೋಕಂತೂ ಆಗಲ್ಲ. ಕೊನೇಪಕ್ಷ ಎಮೋಷನಲ್ ಸಪೋರ್ಟ್ ಆದ್ರೂ ಕೊಡ್ಬೋದಲ್ವಾ? 'ನನ್ನನ್ನ ಪ್ರೀತಿಸೋರು ಇದಾರೆ, ನನ್ನ ಹಿತ ಕಾಯೋರು ಇದಾರೆ' ಅನ್ನೋದು ಕೇತಕಿಗೆ ಒಂದಿಷ್ಟಾದ್ರೂ ಸಮಾಧಾನ ಕೊಡುತ್ತೆ ಅನ್ನೋದಾದ್ರೆ ಅಷ್ಟೂ ಮಾಡೋಕಾಗಲ್ವಾ ನಮ್ಮಿಂದ?"

'ಹೌದು' ಅನ್ನುವಂತೆ ತಲೆ ಕುಣಿಸಿದಳು ಶ್ರಾವಂತಿ. "ಅವಳು ಯಜಮಾನಿಕೆ ಕೈಗೆ ತಗೋತಾಳೆ ಅಂತ ನಿಂಗೆ ಸಿಟ್ಟು. ನಂಗೆಲ್ಲಾ ಗೊತ್ತಿದೆ. ಅಲ್ಲಿ ಸಿಗದೇ ಇರೋದನ್ನ ಇಲ್ಲಿ ಪಡೆದುಕೊಳ್ಳೋ ಮನಸ್ಸಿನ ಒಂದು ಆಟ ಕಣೇ ಅದು. ಸೈಕಾಲಜಿ ನಂಗೂ ಒಂಚೂರು ಗೊತ್ತಿದೆ.."

"....."

"ತನಗೂ ಹಿತೈಷಿಗಳು ಇದಾರೆ ಅಂತ ಗಂಡನ ಮನೇಲಿ ತೋರಿಸ್ಕೊಳ್ಳೋಕೆ ಓಡ್ಬರ್ತಾಳೆ ಅವಳು. ಅವಳನ್ನ ಒಂದು ಮಾತು ಹೊಗಳಿಬಿಟ್ರೆ ನಿಂಗೆ ತಡೆಯೋಕಾಗಲ್ಲ, ಅಲ್ವಾ? ಒಂದು ಒಳ್ಳೇ ಮಾತು ಅವಳ ಜೀವಕ್ಕೆ ಎಷ್ಟು ಹಿತವಾಗುತ್ತೆ, ಟಾನಿಕ್ಕಿನ ಹಾಗೆ ಕೆಲಸ ಮಾಡುತ್ತೆ ಅಂತ ನಂಗೊತ್ತಿದೆ. ಈಗ್ಲೂ ಹೇಳು. ನಿಂಗೆ ಅವಳನ್ನ ಸಹಿಸಿಕೊಳ್ಳೋಕಾಗಲ್ಲ ಅಂದ್ರೆ 'ಬರ್ಬೇಡ ಕಣೇ...' ಅಂತ ಒಂದು ಮಾತು ಹೇಳಿದ್ರೆ ಸಾಕು. ಅರ್ಥ ಮಾಡ್ಕೊಳ್ಳೋಷ್ಟು ಬುದ್ಧಿ ಅವಳಿಗುಂಟು."

ಶ್ರಾವಂತಿ ತನ್ನ ಬಲ ಅಂಗೈಯಿಂದ ನಕುಲನ ಬಾಯಿ ಮುಚ್ಚಿದಳು. ಕಣ್ಣಲ್ಲಿ ಹನಿಗೂಡಿದ ನೀರು ಕೆನ್ನೆಗುಂಟ ಜಾರಿತು. 'ಸಾರಿ ಕಣೋ. ನಂಗೂ ಮನುಷ್ಯತ್ವ ಅನ್ನೋದು ಇದೆ' ಎನ್ನುವ ಮಾತು ಗಂಟಲಲ್ಲೇ ಉಳಿಯಿತು. 'ಮತ್ತೆ ಬಾ ಕೇತಕಿ' ಅನ್ನುವ ದನಿ ಅಂತರಂಗದಲ್ಲಿ ಅನುರಣಿಸಿತು.


## ವಸುಮತಿ ಉಡುಪ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕಿರಣಕೆರೆ ಸ್ವಗ್ರಾಮ. ಪ್ರಸ್ತುತ ಮೈಸೂರಿನಲ್ಲಿ ವಾಸ. ಕತೆ, ಕಾದಂಬರಿ, ನಾಟಕ, ಶಿಶುಸಾಹಿತ್ಯ, ಪ್ರಬಂಧ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ ಮಾಡಿದ್ದಾರೆ. ಸಮಗ್ರ ಕಥಾ ಸಂಕಲನ ಮೂರು ಭಾಗಗಳಲ್ಲಿ ಪ್ರಕಟವಾಗಿದೆ. ಮಲೆನಾಡಿನ ಪರಿಸರ, ಭಾಷೆ, ಜೀವನಶೈಲಿ ಅವರ ಬಹುತೇಕ ಕತೆಗಳ ವಸ್ತು.